ಸಾಕ್ಷಿಯನ್ನು ದಿನಾಂಕಃ 30-05-2024 ರಂದು ಕರೆದು ಪ್ರಮಾಣ ಮಾಡಿಸಲಾಯಿತು.

**<u>ಮುಖ್ಯ ವಿಚಾರಣೆ ಃ ಶ್ರೀ. ಕೆ.ವಿ.ಕೆ ವಾದಿ ಪರ ವಕೀಲರಿಂದ ಃ-</u>**

ಈ ದಿನ ನಾನು ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿವೆ.

ಸಾಕ್ಷಿ ನಿಪಿ-4 ಮೃತ್ಯು ಪತ್ರವನ್ನು ನೋಡಿ ಸದರಿ ಮೃತ್ಯು ಪತ್ರವನ್ನು ನಾನೇ ಪಕ್ಷಗಾರರ ನೀಡಿದ ಮಾಹಿತಿ ಮೇರೆಗೆ ಗಣಕಿಕೃತ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಪಿ-4 ರ ಮೇಲೆ ನಾನು ದಸ್ತೂರ ಅಂತಾ ಸಹಿ ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ಸಾಕ್ಷಿಯು ನಿಪಿ-4 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-4(ಎಫ್) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-4 ರ ಮೇಲಿರುವ ಮೃತ್ಯು ಪತ್ರ ಬರೆದುಕೊಟ್ಟಿರುವ ಹೆಬ್ಬಟ್ಟಿನ ಗುರುತನ್ನು ಹಾಗೂ ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸುತ್ತಾರೆ, ಅವುಗಳನ್ನು ಈಗಾಗಲೇ ನಿಪಿ-4(ಎ) ದಿಂದ 4(ಇ) ಎಂದು ಗುರುತಿಸಲಾಗಿರುತ್ತದೆ.

**<u>ಪಾಟಿ ಸವಾಲುಃ</u>** ಪ್ರತಿವಾದಿ ನಂ.1,2, 4 ರಿಂದ 7 ರವರು ಪ್ರತಿವಾದ ಪತ್ರ ಸಲ್ಲಿಸದೆ ಇರುವುದರಿಂದ ಹಾಗೂ ಪ್ರತಿವಾದಿ ನಂ.3 ಏಕತರ್ಪೆ ಇರುವುದರಿಂದ, ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ